## ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

### ಫೆಬ್ರವರಿ ೧೪, ೨೦೨೨ರ ಸೋಮವಾರದಂದು ನಡೆದ ಕಾರ್ಯಕಾರಿ ಸಮಿತಿ ೨೧೦ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | |
|---|---|
| ೦೧. ಡಾ. ಸ.ಚಿ.ರಮೇಶ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. ಪ್ರೊ. ಹೆಚ್.ಎಸ್. ರಘುನಾಥ, ಶಿವಮೊಗ್ಗ | : ಸದಸ್ಯರು |
| ೦೩. ಪ್ರೊ. ಜಿ.ಸಿ. ರಾಜಣ್ಣ, ಮೈಸೂರು | : ಸದಸ್ಯರು |
| ೦೪. ಶ್ರೀಮತಿ ನಯನಾ ಎಸ್., ಬೆಂಗಳೂರು | : ಸದಸ್ಯರು |
| ೦೫. ಶ್ರೀ ಪ್ರಶಾಂತ್ ಭೀಮಯ್ಯ, ಮಡಿಕೇರಿ | : ಸದಸ್ಯರು |
| ೦೬. ಶ್ರೀ ಜೈಭೀಮ್ ಆರ್.ಕಟ್ಟಿ, ಕಲಬುರಗಿ | : ಸದಸ್ಯರು |
| ೦೭. ಶ್ರೀ ಸಮಿಉಲ್ಲಾ ಖಾನ್, ಬೆಂಗಳೂರು | : ಸದಸ್ಯರು |
| ೦೮. ಡಾ. ವೀರೇಶ ಬಡಿಗೇರ, ಡೀನ್, ಭಾಷಾ ನಿಕಾಯ, ಕವಿಹಂ | : ಸದಸ್ಯರು |
| ೦೯. ಡಾ. ಸಿ.ಎಸ್. ವಾಸುದೇವನ್, ಡೀನ್, ಸಮಾಜ ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೦. ಡಾ. ಕೆ.ರವೀಂದ್ರನಾಥ, ಡೀನ್, ಲಲಿತಕಲೆಗಳ ನಿಕಾಯ, ಕವಿಹಂ | : ಸದಸ್ಯರು |
| ೧೧. ಡಾ. ಮಾಧವ ಪೆರಾಜೆ, ವಿಜ್ಞಾನಗಳ ನಿಕಾಯ, ಕವಿಹಂ | : ಸದಸ್ಯರು |
| ೧೨. ಡಾ. ರಮೇಶ ನಾಯಕ, ಹಣಕಾಸು ಅಧಿಕಾರಿಗಳು, ಕವಿಹಂ | : ವಿಶೇಷ ಆಹ್ವಾನಿತರು |
| ೧೩. ಡಾ. ಎ. ಸುಬ್ಬಣ್ಣ ರೈ, ಕುಲಸಚಿವರು, ಕವಿಹಂ | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | |
|---|---|
| ೦೧. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೨. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೫. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೬. ಪ್ರೊ. ಹೆಚ್.ಎಂ. ಚನ್ನಪ್ಪಗೋಳ, ಬೆಳಗಾವಿ | : ಸದಸ್ಯರು |
| ೦೭. ಡಾ. ಓ. ಓಬಯ್ಯ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಮತ್ತು ಅಧ್ಯಕ್ಷರನ್ನು ಸಭೆಗೆ ಸ್ವಾಗತಿಸಿದರು. ಮಂಡಿಸಲಾದ ಕಾರ್ಯಸೂಚಿಯ ಕುರಿತು ಚರ್ಚಿಸಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು.

**ವಿಷಯ** : ದಿನಾಂಕ ೦೬.೧೨.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೯ನೇ ಸಭೆಯ ನಡೆವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು.(**ಅನುಬಂಧ-೦೧**)

**ನಿರ್ಣಯ** : ದಿನಾಂಕ ೦೬.೧೨.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿ ೨೦೯ನೇ ಸಭೆಯ ನಡೆವಳಿಗಳನ್ನು ಪರಿಶೀಲಿಸಿ ಸಭೆಯು ಅನುಮೋದನೆ ನೀಡಿತು.

**ವಿಷಯ** : ದಿನಾಂಕ ೦೬.೧೨.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೯ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(**ಅನುಬಂಧ-೦೨**)

**ನಿರ್ಣಯ** : ದಿನಾಂಕ ೦೬.೧೨.೨೦೨೧ರಂದು ನಡೆದ ಕಾರ್ಯಕಾರಿ ಸಮಿತಿಯ ೨೦೯ನೇ ಸಭೆಯ ನಡೆವಳಿಗಳ ಅನುಪಾಲನಾ ವರದಿಯನ್ನು ಸಭೆಯ ಪರಿಶೀಲಿಸಿ, ಈ ಕೆಳಗಿನಂತೆ ಕ್ರಮಕೈಗೊಳ್ಳಲು ಸೂಚಿಸಿ ಅನುಪಾಲನಾ ವರದಿಗೆ ಅನುಮೋದನೆ ನೀಡಿತು.

೧. ಡಾ.ಎಂ. ಮಲ್ಲಿಕಾರ್ಜುನಗೌಡ ಇವರ ದುರ್ನಡತೆ ಪ್ರಕರಣಕ್ಕೆ ಸಂಬಂಧಿಸಿದಂತೆ ರಚಿಸಲಾದ ಇಲಾಖಾ ವಿಚಾರಣಾ ಸಮಿತಿಯನ್ನು ಸಿಸಿಎ ನಿಯಮಗಳನ್ವಯ ವಿಚಾರಣಾ ಸಮಿತಿಯನ್ನು ಪುನರ್‌ರಚಿಸಲು ಸಭೆಯು ತೀರ್ಮಾನಿಸಿತು.

**೨೧೦.೦೧** ಕನ್ನಡ ವಿಶ್ವವಿದ್ಯಾಲಯದ ೩೦ನೇ ನುಡಿಹಬ್ಬದಲ್ಲಿ ನಾಡೋಜ ಗೌರವ ಪದವಿಗೆ ಪರಿಗಣಿಸಬಹುದಾದ ಸಾಧಕರ ಪಟ್ಟಿಯನ್ನು ಅಂತಿಮಗೊಳಿಸಿ, ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸುವ ಕುರಿತು.

**ನಿರ್ಣಯ** : ಸದರಿ ವಿಷಯವನ್ನು ಸಭೆಯು ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನ ೧೦ ಮಂದಿ ಸಾಧಕರ ಪಟ್ಟಿಯನ್ನು ನಾಡೋಜ ಆಯ್ಕೆ ಸಮಿತಿಗೆ ಸಲ್ಲಿಸಲು ತೀರ್ಮಾನಿಸಲಾಯಿತು.

೧. ಡಾ. ಕೃಷ್ಣಪ್ಪ. ಜಿ – ಸಾಹಿತ್ಯ
೨. ಡಾ. ಗುರುಲಿಂಗ ಕಾಪಸೆ – ಸಾಹಿತ್ಯ, ಸಂಶೋಧನೆ
೩. ಶ್ರೀ ಚನ್ನಬಸಪ್ಪ. ಗೊ.ರು. – ಸಾಹಿತ್ಯ, ಜಾನಪದ, ಶಿಕ್ಷಣ
೪. ಡಾ. ನಾಸಿರ್ ಅಹಮ್ಮದ್ ಸಿ.ಆರ್. – ಸಮಾಜ ಸೇವೆ
೫. ಪ್ರೊ. ಗುರುಸ್ವಾಮಿ ಮಲೆಯೂರು – ಸಾಹಿತ್ಯ
೬. ಡಾ. ಭಾಷ್ಯಂ ಸ್ವಾಮಿ – ಆಧ್ಯಾತ್ಮ, ಸಂಸ್ಕೃತ ಮತ್ತು ಕನ್ನಡ ಸಾಹಿತ್ಯ
೭. ಡಾ. ರಮೇಶ ಎಂ.ಕೆ. – ಶಿಕ್ಷಣ
೮. ಪ್ರೊ. ವೆಂಕಟಾಚಲಶಾಸ್ತ್ರಿ ಟಿ.ವಿ. – ಸಾಹಿತ್ಯ, ಸಂಶೋಧನೆ
೯. ಡಾ. ಶರ್ಮಾ. ಎಸ್.ಸಿ. – ಶಿಕ್ಷಣ, ತಂತ್ರಜ್ಞಾನ ಮತ್ತು ಸಂಗೀತ
೧೦. ಡಾ. ಶಿವಾನಂದ ನಾಯಕ – ಶಿಕ್ಷಣ, ವೈದ್ಯಕೀಯ ಮತ್ತು ಸಾಮಾಜಿಕ

**೨೧೦.೦೨** ನವೆಂಬರ್ ೨೩, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

**ಟಿಪ್ಪಣಿ :** ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೨೩.೧೧.೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೧೦.೦೩** ನವೆಂಬರ್ ೨೯, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

**ಟಿಪ್ಪಣಿ :** ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೨೯.೧೧.೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೧೦.೦೪** ಡಿಸೆಂಬರ್ ೩೧, ೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

**ಟಿಪ್ಪಣಿ :** ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೩೧.೧೨.೨೦೨೧ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಮಾರ್ಚ್ ೨೦೨೨ರಿಂದ ಪಿಎಚ್.ಡಿ. ಪ್ರವೇಶ ಪ್ರಕ್ರಿಯೆಯನ್ನು ಕೈಗೊಳ್ಳಲು ಸೂಚಿಸಿ ಅನುಮೋದನೆ ನೀಡಿತು.

**೨೧೦.೦೫** ಜನವರಿ ೨೧, ೨೦೨೨ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

**ಟಿಪ್ಪಣಿ :** ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೨೧.೦೧.೨೦೨೨ರಂದು ನಡೆದ ಡೀನ್ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ :** ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

**೨೧೦.೦೬** ದಿನಾಂಕ ೦೧.೦೧.೨೦೨೨ರಂದು ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪ್ರಾಧ್ಯಾಪಕರು, ಚರಿತ್ರೆ ವಿಭಾಗ, ಇವರು ಸೆಬಾಟಿಕಲ್ ರಜೆ ಕೋರಿ ಸಲ್ಲಿಸಿರುವ ಮನವಿ ಕುರಿತು.

**ಟಿಪ್ಪಣಿ :** ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಇವರು 'ವಿಜಯನಗರ ಸಾಳುವ ವಂಶದ ಚರಿತ್ರೆ: ಮರುಚಿಂತನೆ' ಎಂಬ ವಿಷಯಕ್ಕೆ ಸಂಬಂಧಿಸಿದ ಯೋಜನೆಯನ್ನು ಕೈಗೊಳ್ಳಲು ಒಂದು ವರ್ಷದ ಅವಧಿಯ ಸೆಬಾಟಿಕಲ್ ರಜೆಗೆ ದಿನಾಂಕ ೦೧.೦೧.೨೦೨೨ರಂದು ಮನವಿಯನ್ನು ಸಲ್ಲಿಸಿದ್ದಾರೆ. ದಿನಾಂಕ ೨೬.೧೦.೨೦೨೧ರ ಚರಿತ್ರೆ ವಿಭಾಗದ ಅಧ್ಯಯನ ಮಂಡಳಿ ಸಮಿತಿ ಸಭೆ ಅನುಮೋದನೆ ಮೇರೆಗೆ ಹಾಗೂ ಯುಜಿಸಿ ನಿಯಮಾವಳಿ ೨೦೧೦ರ ಅನ್ವಯ (ದಿ ಗೆಜೆಟಿಯರ್ ಆಫ್ ಇಂಡಿಯಾ ಸೆಪ್ಟಂಬರ್ ೧೮, ೨೦೧೦–ಪಾರ್ಟ್–೩ ಸೆಕ್ಷನ್–೪ ಕಂಡಿಕೆ ೮.೩) ಹಾಗೂ ವಿಶ್ವವಿದ್ಯಾಲಯಗಳ ನಿಯಮಾವಳಿಗಳನ್ವಯ ಸೆಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

**ನಿರ್ಣಯ :** ನಿಯಮಾನುಸಾರ ಸೆಬಾಟಿಕಲ್ ರಜೆಯನ್ನು ಮಂಜೂರು ಮಾಡಲು ಸಭೆ ತೀರ್ಮಾನಿಸಿತು.

**೨೧೦.೦೭** ದಿವಂಗತ ಡಾ. ಸಿ.ಆರ್. ಗೋವಿಂದರಾಜು ಇವರ ಅವಲಂಬಿತ ಕುಟುಂಬ ಸದಸ್ಯರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಕುರಿತು.

**ಟಿಪ್ಪಣಿ :** ದಿವಂಗತ ಡಾ. ಸಿ.ಆರ್. ಗೋವಿಂದರಾಜು ಇವರ ಪತ್ನಿಯಾದ ಶ್ರೀಮತಿ ಟಿ.ಕೆ. ಭಾಗ್ಯವತಿ ಇವರು ದಿನಾಂಕ ೨೦.೧೨.೨೦೨೧ರ ಪತ್ರದ ಮೂಲಕ ಅವರ ಮಗಳಾದ ಕು. ಆಂಶಿಕ ಜಿ. ಅವರಿಗೆ ೧೮ ವರ್ಷ ವಯಸ್ಸು ತುಂಬಿದ ನಂತರ ಅನುಕಂಪದ ಆಧಾರದಲ್ಲಿ ಖಾಯಂ ನೌಕರಿಯನ್ನು ನೀಡಲು ಕೋರಿ ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಕಾರಿ ಸಮಿತಿಯ ನಿರ್ದೇಶನ ಕೋರಿದೆ.

ನಿರ್ಣಯ : ವಿಶ್ವವಿದ್ಯಾಲಯದಲ್ಲಿ ರಿಕ್ತವಾಗಿರುವ ಹುದ್ದೆಗಳನ್ನು ಅನುಲಕ್ಷಿಸಿ, ಅವಲಂಬಿತ ಅರ್ಜಿದಾರರ ವಿದ್ಯಾರ್ಹತೆಗೆ ತಕ್ಕಂತೆ ನಿಯಮಾನುಸಾರ ಅನುಕಂಪ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು.

೨೧೦.೦೮ ದಿವಂಗತ ಡಾ. ಕಲವೀರ ಮನ್ವಾಚಾರ್ ಇವರ ಅವಲಂಬಿತ ಕುಟುಂಬ ಸದಸ್ಯರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಕುರಿತು.

ಟಿಪ್ಪಣಿ : ದಿವಂಗತ ಡಾ. ಕಲವೀರ ಮನ್ವಾಚಾರ್ ಇವರ ಅವಲಂಬಿತ ಕುಟುಂಬದ ಸದಸ್ಯರು ಅನುಕಂಪದ ಆಧಾರಿತ ನೇಮಕಾತಿ ಕೋರಿ ದಿನಾಂಕ ೧೩.೦೧.೨೦೨೨ರಂದು ಸಲ್ಲಿಸಿರುವ ಮನವಿಯ ಹಿನ್ನೆಲೆಯಲ್ಲಿ ದಿವಂಗತರ ಮಗಳಾದ ಕು. ಮೌನ ಕೆ.ಎಂ. ಅವರನ್ನು ಅನುಕಂಪದ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿಯ ಅನುಮೋದನೆ ಕೋರಿದೆ.

ನಿರ್ಣಯ : ವಿಶ್ವವಿದ್ಯಾಲಯದಲ್ಲಿ ರಿಕ್ತವಾಗಿರುವ ಹುದ್ದೆಗಳನ್ನು ಅನುಲಕ್ಷಿಸಿ, ಅವಲಂಬಿತ ಅರ್ಜಿದಾರರ ವಿದ್ಯಾರ್ಹತೆಗೆ ತಕ್ಕಂತೆ ನಿಯಮಾನುಸಾರ ಅನುಕಂಪ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಸಭೆಯು ತೀರ್ಮಾನಿಸಿತು.

೨೧೦.೦೯ ಶ್ರೀಮತಿ ಚಿತ್ರಕಲಾ ದಿಗ್ಸಂಗಿಕರ್, ಕಿರಿಯ ಸಹಾಯಕಿ ಇವರನ್ನು ಗುಲ್ಬರ್ಗಾ ವಿಶ್ವವಿದ್ಯಾಲಯದ ಪ್ರತಿನಿಯೋಜನೆ ಮೇಲೆ ಮುಂದುವರಿಸುವ ಕುರಿತು.

ಟಿಪ್ಪಣಿ : ಶ್ರೀಮತಿ ಚಿತ್ರಕಲಾ ದಿಗ್ಸಂಗಿಕರ್, ಕಿರಿಯ ಸಹಾಯಕಿ ಇವರು ದಿನಾಂಕ ೧೨.೦೧.೨೦೨೨ರ ಪತ್ರದ ಮೂಲಕ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಪ್ರತಿನಿಯೋಜನೆ ಅವಧಿಯನ್ನು ಮೂರು ವರ್ಷಗಳ ಅವಧಿಗೆ ಮುಂದುವರಿಸಲು ಕೋರಿದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳು ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ನಿರೀಕ್ಷಿಸಿ ಸದರಿಯವರ ಪ್ರತಿನಿಯೋಜನೆಯನ್ನು ದಿನಾಂಕ ೦೧.೦೨.೨೦೨೨ ರಿಂದ ೩೧.೦೧.೨೦೨೫ರ (ಮೂರು ವರ್ಷಗಳ) ಅವಧಿಗೆ ವಿಸ್ತರಿಸಲು ಒಪ್ಪಿಗೆ ಸೂಚಿಸಿದ ಹಿನ್ನೆಲೆಯಲ್ಲಿ ಆದೇಶ ನೀಡಲಾಗಿದೆ. ಸದರಿ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ : ಈ ಸಂಬಂಧ ಪರಿಶೀಲಿಸಿದ ಸಮಿತಿಯು ಗುಲಬರ್ಗಾ ವಿಶ್ವವಿದ್ಯಾಲಯದಿಂದ ತತ್ಸಂಬಂಧವಾಗಿ ಬರಬಹುದಾದ ಆದೇಶವನ್ನು ನಿರೀಕ್ಷಿಸಿ ಘಟನೋತ್ತರ ಅನುಮೋದನೆ ನೀಡಿತು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೨೧೦.೧೦ ಫೆಬ್ರವರಿ ೦೯, ೨೦೨೧ರಂದು ನಡೆದ ಡೀನ್ ಸಮಿತಿ ಸಭೆಯ ನಡವಳಿಗಳಿಗೆ ಅನುಮೋದನೆ ನೀಡುವ ಕುರಿತು.

ಟಿಪ್ಪಣಿ : ಶೈಕ್ಷಣಿಕ ಹಾಗೂ ಆಡಳಿತ ವಿಷಯಗಳಿಗೆ ಸಂಬಂಧಪಟ್ಟಂತೆ ದಿನಾಂಕ ೦೯.೦೨.೨೦೨೨ರಂದು ನಡೆದ ಡೀನ್ ಸಮಿತಿ ಸಭೆಯ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ನಡೆವಳಿಯನ್ನು ಸಭೆಯು ಪರಿಶೀಲಿಸಿ ಈ ಕೆಳಗಿನ ನಿರ್ಣಯಗಳೊಂದಿಗೆ ಅನುಮೋದನೆ ನೀಡಿತು.

೧. ಡೀನ್ ಸಮಿತಿ ನಿರ್ಣಯದಂತೆ ಸಂಬಂಧಪಟ್ಟ ವಿದ್ಯಾರ್ಥಿಗಳ ಪಿಎಚ್.ಡಿ. ಅಧ್ಯಯನವನ್ನು ಪೂರ್ಣಗೊಳಿಸಲು ಅವಕಾಶ ಕಲ್ಪಸುವುದು.

೨. ನಾಡೋಜ ಗೌರವ ಪದವಿ ಪುರಸ್ಕೃತರು 'ನಾಡೋಜ' ಉಪಾಧಿಯನ್ನು ಬಳಸಬಾರದೆಂಬ ಬಗ್ಗೆ ನಿಯಮವನ್ನು ರೂಪಿಸುವುದು.

೨೧೦.೧೧ ಮಾದಿಗ ದಾಸರಿ (ಮಾದಿಗ ದಾಸು) ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಯೋಜನೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕುರಿತು.

ಟಿಪ್ಪಣಿ : ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯು ಕನ್ನಡ ವಿಶ್ವವಿದ್ಯಾಲಯದ ಡಾ. ಎಲ್. ಶ್ರೀನಿವಾಸ, ಪ್ರಾಧ್ಯಾಪಕರು, ಮಾನವಶಾಸ್ತ್ರ ವಿಭಾಗ ಇವರ ಮೂಲಕ ನಡೆಸಲು ಇಲಾಖೆಯು ಮಾದಿಗ ದಾಸರಿ (ಮಾದಿಗ ದಾಸು) ಸಮುದಾಯದ ಕುಲಶಾಸ್ತ್ರೀಯ ಅಧ್ಯಯನ ಯೋಜನೆಯನ್ನು ಕೈಗೊಳ್ಳಲು ಕಾರ್ಯಾದೇಶವನ್ನು ನೀಡಿದ ಹಿನ್ನೆಲೆಯಲ್ಲಿ ಸದರಿ ಯೋಜನೆಯನ್ನು ಕೈಗೊಳ್ಳಲು ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ನಿಯಮಾನುಸಾರ ಯೋಜನೆಯನ್ನು ಕೈಗೊಳ್ಳಲು ಸಭೆ ಅನುಮೋದನೆ ನೀಡಿತು.

೨೧೦.೧೨ ದಿನಾಂಕ ೨೪.೧೨.೨೦೨೧ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಉನ್ನತ ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಚಿತ್ರಕಲಾ ವಿದ್ಯಾಲಯಗಳನ್ನು ವಿಶ್ವವಿದ್ಯಾಲಯದ ವ್ಯಾಪ್ತಿಗೆ ಪಡೆಯುವ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮಕೈಗೊಳ್ಳಲು ಸಭೆ ಸೂಚಿಸಿ, ನಡೆವಳಿಗಳಿಗೆ ಅನುಮೋದನೆ ನೀಡಿತು.

೨೧೦.೧೩ ದಿನಾಂಕ ೧೧.೦೧.೨೦೨೨ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ರಾಷ್ಟ್ರೀಯ ಶಿಕ್ಷಣ ನೀತಿ ೨೦೨೦ರ ಪಠ್ಯಕ್ರಮ ರಚನಾ ಪರಿಷ್ಕರಣ ಸಮಿತಿ ಸಭೆ ನಡೆವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೦.೧೪ ದಿನಾಂಕ ೧೧.೦೧.೨೦೨೨ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿ.ವಿ.ಎ. ಪದವಿ ಕೋರ್ಸ್‌ಗಳ ಪರೀಕ್ಷಾ ಮಂಡಳಿ ಸಭೆ ಪರಿಷ್ಕೃತ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೦.೧೫ ದಿನಾಂಕ ೦೩.೦೨.೨೦೨೨ರಂದು ನಡೆದ ಚಿತ್ರಕಲಾ ವಿದ್ಯಾಲಯಗಳ ನಿರ್ವಹಣಾ ಕೇಂದ್ರದ ಬಿ.ವಿ.ಎ. ಪದವಿ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಪರೀಕ್ಷಾ ಮಂಡಳಿ ಸಮಿತಿ ಸಭೆ ನಡವಳಿಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ನೀಡುವ ಕುರಿತು.

ನಿರ್ಣಯ : ಸದರಿ ನಡವಳಿಗಳನ್ನು ಸಭೆಯು ಪರಿಶೀಲಿಸಿ ಅನುಮೋದನೆ ನೀಡಿತು.

೨೧೦.೧೬ ಡಿ.ಎಲ್. ನರಸಿಂಹಾಚಾರ್ ದತ್ತಿನಿಧಿಗೆ ಸಂಬಂಧಿಸಿದ ವಿಷಯ ಕುರಿತು.

ಟಿಪ್ಪಣಿ : ಕನ್ನಡದ ಪ್ರಸಿದ್ಧ ವಿದ್ವಾಂಸರಲ್ಲಿ ಡಾ. ಡಿ.ಎಲ್. ನರಸಿಂಹಾಚಾರ್ ಅವರು ಒಬ್ಬರು. ೨೦೦೬ರಲ್ಲಿ ಡಿ.ಎಲ್.ಎನ್. ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಅವರ ಕುಟುಂಬ ಪರಿವಾರದವರು ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದಲ್ಲಿ ರೂ. ೧.೦೦ ಲಕ್ಷಗಳ ದತ್ತಿನಿಧಿಯನ್ನು ನೀಡಿದ್ದರು. ಇದರ ಜೊತೆಗೆ ಈಗ ಪುನಃ ಹೆಚ್ಚುವರಿಯಾಗಿ ರೂ. ೪.೦೦ ಲಕ್ಷಗಳನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ದತ್ತಿನಿಧಿಯಾಗಿ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ದತ್ತಿನಿಧಿಯ ಮೊತ್ತವನ್ನು ರೂ. ೫.೦೦ ಲಕ್ಷಗಳಾಗಿ ಪರಿಷ್ಕರಿಸಿ ಮುಂದುವರಿಸಲು ಕಾರ್ಯಕಾರಿ ಸಮಿತಿ ಅನುಮೋದನೆಗಾಗಿ ಮಂಡಿಸಲಾಗಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯದ ಎಲ್ಲಾ ದತ್ತಿನಿಧಿ ಮತ್ತು ಪೀಠಗಳ ವಿವರಗಳನ್ನು ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲು ಸೂಚಿಸಿ ಅನುಮೋದನೆ ನೀಡಿತು.

೨೧೦.೧೭ ಯುಜಿಸಿ ವೇತನ ಪಡೆಯುತ್ತಿರುವ ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ ಸಿಬ್ಬಂದಿಗಳ ಸಿಎಎಸ್ ಅರ್ಜಿ ಕರೆಯುವ ಬಗ್ಗೆ.

ಟಿಪ್ಪಣಿ : ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಖಾಯಂ ಆಗಿ ಕಾರ್ಯನಿರ್ವಹಿಸುತ್ತಿರುವ ಯುಜಿಸಿ ವೇತನ ಪಡೆಯುತ್ತಿರುವ, ಸಿಎಎಸ್ ಅರ್ಹತೆಗಳನ್ನು ಹೊಂದಿರುವ ಸಿಬ್ಬಂದಿಗಳಿಂದ ಯುಜಿಸಿ ನಿಯಮಾನುಸಾರ ಸಿಎಎಸ್ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಚರ್ಚಿಸಿ ನಿಯಮಾನುಸಾರ ಕ್ರಮವಹಿಸಲು ಅನುಮೋದನೆ ನೀಡಿತು.

೨೧೦.೧೮ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳ ನೇಮಕಾತಿಯ ಶೋಧನಾ ಸಮಿತಿಗೆ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡುವ ಕುರಿತು.

ಟಿಪ್ಪಣಿ : ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ ಇಡಿ ೨೨ ಕೆವಿವಿ ೨೦೨೧ ದಿನಾಂಕ ೨೫.೧೧.೨೦೨೧ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಪ್ರಸ್ತುತ ಕುಲಪತಿಯವರ ಅವಧಿಯು ಫೆಬ್ರವರಿ ೨೧, ೨೦೨೨ಕ್ಕೆ ಮುಕ್ತಾಯಗೊಳ್ಳಲಿದ್ದು, ಆ ಸ್ಥಾನಕ್ಕೆ ನೂತನ ಕುಲಪತಿಗಳ ನೇಮಕಾತಿಗಾಗಿ ಕನ್ನಡ ವಿಶ್ವವಿದ್ಯಾಲಯದ ಕಾಯ್ದೆ ೧೯೯೧ ಸೆಕ್ಷನ್ ೧೩(೨)ರ ಅನ್ವಯ ಒಂದು ಶೋಧನಾ ಸಮಿತಿಯನ್ನು ರಚಿಸಬೇಕಾಗಿದೆ ಎಂದು ತಿಳಿಸಿದ್ದಾರೆ. ಈ ಶೋಧನಾ ಸಮಿತಿಗೆ ವಿಶ್ವವಿದ್ಯಾಲಯದ ಕಾರ್ಯಕಾರಿ ಸಮಿತಿಯು ಶಿಫಾರಸ್ಸು ಮಾಡುವ ಒಬ್ಬ ಸದಸ್ಯರನ್ನು ನಾಮನಿರ್ದೇಶನ ಮಾಡಿ ಹೆಸರನ್ನು ಕೂಡಲೇ ಕಳುಹಿಸುವಂತೆ ಸದರಿ ಪತ್ರದಲ್ಲಿ ತಿಳಿಸಿರುತ್ತಾರೆ. ಈ ಶೋಧನಾ ಸಮಿತಿಗೆ ಒಬ್ಬ ಸದಸ್ಯರ ಹೆಸರನ್ನು ಸೂಚಿಸಲು ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಕನ್ನಡ ವಿಶ್ವವಿದ್ಯಾಲಯದ ನೂತನ ಕುಲಪತಿಗಳ ನೇಮಕಾತಿಗಾಗಿ ರಚಿಸಲಾಗುವ ಶೋಧನಾ ಸಮಿತಿಗೆ ಡಾ. ವಿಷ್ಣುಕಾಂತ ಚಟಪಳ್ಳಿ, ಕುಲಪತಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ, ಗದಗ ಅವರ ಹೆಸರನ್ನು ನಾಮನಿರ್ದೇಶನ ಮಾಡಲು ಸಭೆಯು ಅನುಮೋದನೆ ನೀಡಿತು.

೨೧೦.೧೯ ವಲಯ ಅರಣ್ಯಾಧಿಕಾರಿ ಹೊಸಪೇಟೆ ವಲಯ ಇವರು ದಿನಾಂಕ ೪.೨.೨೦೨೨ರ ಪತ್ರದ ಮೂಲಕ ವಿದ್ಯಾರಣ್ಯ ಆವರಣದಲ್ಲಿರುವ ವಸತಿಗೃಹವನ್ನು ಹಂಚಿಕೆ ಮಾಡಲು ಮನವಿ ಸಲ್ಲಿಸಿರುವ ಕುರಿತು.

ಟಿಪ್ಪಣಿ : ವಲಯ ಅರಣ್ಯಾಧಿಕಾರಿ ಹೊಸಪೇಟೆ ವಲಯ ಇವರು ದಿನಾಂಕ ೪.೨.೨೦೨೨ರ ಪತ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯದ ಆವರಣದಲ್ಲಿರುವ ವಸತಿಗೃಹವನ್ನು ಶ್ರೀ ಹೆಚ್.ಸಿ. ಗಿರೀಶ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ವಾಸಿಸಲು ಬಾಡಿಗೆ ಆಧಾರದ ಮೇಲೆ ವಸತಿಗೃಹವನ್ನು ಹಂಚಿಕೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ವಸತಿಗೃಹವನ್ನು ಬಾಡಿಗೆ ಆಧಾರದ ಮೇಲೆ ನೀಡಲು ಕಾರ್ಯಕಾರಿ ಸಮಿತಿ ನಿರ್ದೇಶನ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ವಿಶ್ವವಿದ್ಯಾಲಯಕ್ಕೆ ಅಗತ್ಯವಿದ್ದ ಸಂದರ್ಭದಲ್ಲಿ ಬಿಟ್ಟುಕೊಡುವ ಷರತ್ತಿನೊಂದಿಗೆ ವಸತಿಗೃಹವನ್ನು ಬಾಡಿಗೆ ಆದಾರದ ಮೇಲೆ ನೀಡಲು ಸಭೆ ಅನುಮೋದನೆ ನೀಡಿತು.

೨೧೦.೨೦ ಸೇವಾಪೂರ್ವ ಅವಧಿಯ ಘೋಷಣೆ ಸಂಬಂಧ ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಕ್ರಮಾಂಕ: ಇಡಿ ೨೦ ಕೆವಿವಿ ೨೦೧೯, ದಿನಾಂಕ ೧೦.೦೧.೨೦೨೨ರ ಪತ್ರದ ಕುರಿತು.

ನಿರ್ಣಯ : ಈ ಕುರಿತು ಸಭೆಯು ಚರ್ಚಿಸಿ ನೇಮಕಾತಿ ಪ್ರಕ್ರಿಯೆಗಳ ಬಗೆಗೆ ಪರಿಶೀಲಿಸಲು ಈ ಕೆಳಗಿನಂತೆ ಸಮಿತಿಯನ್ನು ರಚಿಸಲು ತೀರ್ಮಾನಿಸಿತು.

೧. ಪ್ರೊ. ಜಿ.ಸಿ. ರಾಜಣ್ಣ – ಅಧ್ಯಕ್ಷರು
೨. ಶ್ರೀಮತಿ ಎಸ್. ನಯನಾ – ಸದಸ್ಯರು
೩. ಶ್ರೀ ಜೈಭೀಮ್ ಆರ್. ಕಟ್ಟಿ – ಸದಸ್ಯರು
೪. ಶ್ರೀ ಯು.ಬಿ. ಉಳವಿ, ಕರ್ನಾಟಕ ಸರ್ಕಾರದ ನಿವೃತ್ತ ಉಪಕಾರ್ಯದರ್ಶಿ – ಸದಸ್ಯರು
೫. ಡಾ. ಪ್ರಶಾಂತ್, ಎಸ್.ಜೆ. ಸಹ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಅಕ್ಕಮಹಾದೇವಿ ವಿಶ್ವವಿದ್ಯಾಲಯ – ಸದಸ್ಯರು
೬. ಉಪಕುಲಸಚಿವರು (ಆಡಳಿತ) – ಸದಸ್ಯ ಸಂಚಾಲಕರು

೨೧೦.೨೧ ದಿನಾಂಕ ೨೪.೦೧.೨೦೨೨ರಂದು ಹಾಗೂ ದಿನಾಂಕ ೧೧.೦೨.೨೦೨೨ರಂದು ನಡೆದ ೨೦೨೧–೨೨ನೇ ಸಾಲಿನ ಮೊದಲನೇ ಮತ್ತು ಎರಡನೇ ತ್ರೈಮಾಸಿಕ ಅವಧಿಯ ಹಣಕಾಸು ಸಲಹಾ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ನೀಡುವ ಕುರಿತು.

ನಿರ್ಣಯ : ೧. ಸದರಿ ನಡೆವಳಿಗಳನ್ನು ಸಭೆಯು ಪರಿಶೀಲಿಸಿ ರೂಸಾಕ್ಕೆ ಸಂಬಂಧಿಸಿದ ಆಯ–ವ್ಯಯಗಳ ಮಾಹಿತಿಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರಿಗೆ ಸಲ್ಲಿಸುವಂತೆ ಸೂಚಿಸಿ ನಡೆವಳಿಗಳಿಗೆ ಅನುಮೋದನೆ ನೀಡಿತು.

೨. ನಿವೃತ್ತ ನೌಕರರಾದ ಡಾ.ಎನ್. ಅಮರೇಶ ಅವರ ನಿವೃತ್ತಿ ವೇತನ ಹಾಗೂ ನಿಧನ ಹೊಂದಿದ ನೌಕರರಾದ ಡಾ.ಕಲವೀರ ಮನ್ವಾಚಾರ್ ಅವರ ಕುಟುಂಬ ಪಿಂಚಣಿಯನ್ನು ಇತ್ಯರ್ಥಗೊಳಿಸುವ ಬಗೆಗೆ ಚರ್ಚಿಸಿ ಲೆಕ್ಕ ಪರಿಶೋಧನೆಗಳಲ್ಲಿ ಸಂಬಂಧಪಟ್ಟ ನೌಕರರಿಂದ ವಸೂಲಾತಿಗೆ ಸೂಚಿಸಿರುವ ಮೊತ್ತವನ್ನು ಮಾಸಿಕ ನಿವೃತ್ತಿ ವೇತನ/ಕುಟುಂಬ ಪಿಂಚಣಿ ಮೊತ್ತದಲ್ಲಿ ಸಮಾನ ಹತ್ತು ಕಂತುಗಳಲ್ಲಿ ಕಡಿತ ಮಾಡಿಕೊಳ್ಳಲಾಗುವುದೆಂದು ಆದೇಶದಲ್ಲಿ ನಮೂದಿಸಿ, ಅದರಂತೆ ಕ್ರಮವಹಿಸಿ ಸದರಿಯವರಿಗೆ ನಿವೃತ್ತಿ ವೇತನ/ಕುಟುಂಬ ಪಿಂಚಣಿ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

೨೧೦.೨೨ ಕನ್ನಡ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ವಿಜಯನಗರ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಪ್ರಸ್ತಾವ ಮತ್ತು ಅನುಶಾಸನವನ್ನು ಸಿದ್ಧಪಡಿಸಿ, ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲು ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ನಿಯಮಾನುಸಾರ ಪ್ರಸ್ತಾವ ಮತ್ತು ಅನುಶಾಸನವನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು.

೨೧೦.೨೩ ದಿನಾಂಕ ೦೩.೦೯.೨೦೨೧ರ ಖರೀದಿ ಸಮಿತಿ ಸಭೆ ನಡೆವಳಿಗಳಿಗೆ ೨೦೮(೧೩) ಹಾಗೂ ೨೦೯(೧೨)ನೇ ಕಾರ್ಯಕಾರಿ ಸಮಿತಿ ನಿರ್ಣಯದ ಹಿನ್ನೆಲೆಯಂತೆ ಸದರಿ ಸಮಿತಿ ಸಭೆ ನಡೆವಳಿಗಳಿಗೆ ಅನುಮೋದನೆ ಕೋರಿದೆ.

ನಿರ್ಣಯ : ಖರೀದಿ ಸಮಿತಿಯ ಅನುಮೋದನೆಯ ಹಿನ್ನೆಲೆಯಲ್ಲಿ ಸದರಿ ನಡೆವಳಿಗಳಿಗೆ ಸಭೆಯು ಅನುಮೋದನೆ ನೀಡಿತು.

೨೧೦.೨೪ ಕನ್ನಡ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು, ಹೈದ್ರಾಬಾದ್ ಕರ್ನಾಟಕ ಸಂಶೋಧನ ಕೇಂದ್ರ, ಬೀದರ ಹಾಗೂ ಕರ್ನಾಟಕ ಸಂಘ(ರಿ), ಮಂಡ್ಯ ಸಂಶೋಧನಾ ಕೇಂದ್ರಗಳು ಪಿಎಚ್.ಡಿ. ಅಧ್ಯಯನಕ್ಕೆ ಸೀಟುಗಳನ್ನು ಹೆಚ್ಚಿಸುವಂತೆ ಕೋರಿ ಮನವಿ ಸಲ್ಲಿಸಿರುವ ಕುರಿತು.

ನಿರ್ಣಯ : ಸದರಿ ವಿಷಯವನ್ನು ಸಭೆಯು ಪರಿಶೀಲಿಸಿ ಮಾನ್ಯತಾ ಸಂಸ್ಥೆಗಳಿಗೆ ೫ ಪಿಎಚ್.ಡಿ. ಸ್ಥಾನಗಳನ್ನು ಹೆಚ್ಚುವರಿಯಾಗಿ ನೀಡಬಹುದೆಂದೂ ತತ್ಸಂಬಂಧವಾಗಿ ನಿಯಮವನ್ನು ರೂಪಿಸಿ ಕ್ರಮಕೈಗೊಳ್ಳುವುದೆಂದೂ ತೀರ್ಮಾನಿಸಿತು.

೨೧೦.೨೫ ಪಿಎಚ್.ಡಿ. ಮೌಲ್ಯಮಾಪಕರ ಪಟ್ಟಿ ಪರಿಷ್ಕರಣೆ ಕುರಿತು.

ನಿರ್ಣಯ : ಈಗಿರುವ ಪಿಎಚ್.ಡಿ. ಮೌಲ್ಯಮಾಪಕರ ಪಟ್ಟಿಯನ್ನು ಆಮೂಲಾಗ್ರವಾಗಿ ಪರಿಷ್ಕರಿಸಲು ಸಭೆ ತೀರ್ಮಾನಿಸಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು